ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಮಂಗಳವಾರ ೩ನೇ ಮಾರ್ಚ್ ೧೯೮೭ ಫಾಲ್ಗುಣ ೧೨: ೧೯೦೮ ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೦-೦೦ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಬಿ.ಜಿ. ಬಣಕಾರ್) ಅವರು ಪೀಠವನ್ನು ಅಲಂಕರಿಸಿದರು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಅಧ್ಯಕ್ಷರು. —ಪ್ರಶ್ನೆ ಸಂಖ್ಯೆ ೨೨೯(೩೦೭) ಶ್ರೀ ಜಿ.ಎಸ್. ಹೆಗಡೆ, ಅಜ್ಜಿಬಾಳ್, ತಡೆ ಹಿಡಿಯಲಾಗಿದೆ.

ಪ್ರಶ್ನೆ ಸಂಖ್ಯೆ ೨೩೦(೧೫೧೧) ಶ್ರೀ ಬಾಬುರೆಡ್ಡಿ ತುಂಗಳ್, ಗೈರು ಹಾಜರಿ.

ಪ್ರಶ್ನೆ ಸಂಖ್ಯೆ ೨೩೧(೨೫) ಶ್ರೀ ವೇದಾಂತ ಹೆಮ್ಮಿಗೆ, ಗೈರು ಹಾಜರಿ.

ಪ್ರಶ್ನೆ ಸಂಖ್ಯೆ ೨೩೨(೪೦೩) ಶ್ರೀ ಆರ್. ವೆಂಕಟರಾಮಯ್ಯ, ಶ್ರೀ ಟಿ ಎಸ್.ಮಣಿ ಗೈರು ಹಾಜರಿ.

ತನಿಖಾ ಆಯೋಗಗಳು ಹಾಗೂ ಅಧ್ಯಯನ ಸಮಿತಿಗಳು

೫೯೦. ಶ್ರೀ ಎನ್.ಎಂ. ಅಡ್ಯಂತಾಯ (ಉಲ್ಲಾಳ) —ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸರ್ಕಾರವು ೧೯೮೩ರ ಮಾರ್ಚ್ ೧ರಿಂದ ೧೯೮೬ರ ಡಿಸೆಂಬರ್ ೩೧ರ ವರೆಗೆ ಸ್ಥಾಪಿಸಿದ ತನಿಖಾ ಆಯೋಗಗಳು ಮತ್ತು ಅಧ್ಯಯನ ಸಮಿತಿಗಳ ಸಂಖ್ಯೆ ಎಷ್ಟು ?

ಆ) ಪ್ರದರಿ ಆಯೋಗಗಳು ಮತ್ತು ಅಧ್ಯಯನ ಸಮಿತಿಗಳನ್ನು ಯಾವ ಕಾರಣಗಳಿಗಾಗಿ ಸ್ಥಾಪಿಸಲ್ಪಟ್ಟವು ?

ಇ) ಈ ಆಯೋಗಗಳು ಮತ್ತು ಸಮಿತಿಗಳಿಗಾಗಿ ಸರ್ಕಾರ ಖರ್ಚು ಮಾಡಿದ ಹಣ ಎಷ್ಟು ?

ಈ) ಈ ಆಯೋಗಗಳು ಮತ್ತು ಸಮಿತಿಗಳ ವರದಿಗಳ ಮೇಲೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಆಯೋಗಗಳು – ೨೦
ಅಧ್ಯಯನ ಸಮಿತಿಗಳು – ೬

ಆ) ಅನುಬಂಧ ೧ರ ೩ನೇ ಕಾಲಮು.

ಇ) ಈವರೆಗೂ ಖರ್ಚಾದ ಹಣ ರೂ. ೩೮, ೧೦, ೭೮೦–೭೪ ಗಳು. (ವಿವರವನ್ನು ಅನುಬಂಧ –೧ರ ಹಿನೇ ಕಾಲಂ ನಲ್ಲಿ ಸೂಚಿಸಲಾಗಿದೆ).

ಈ) ಅನುಬಂಧ–೨.

ಅ ನು ಬ ಂ ಧ–೧

ಕ್ರಮ ಸಂಖ್ಯೆ	ಆಯೋಗಗಳು : ಸಮಿತಿಗಳ ಹೆಸರು	ಸ್ಥಾಪಿಸಿದ ಉದ್ದೇಶ	ವರದಿ ಸಲ್ಲಿಸಿದ ಬಗ್ಗೆ	ವೆಚ್ಚ
೧	೨	೩	೪	೫
೧	ಎಸ್. ಎಂ. ಬ್ಯಾಡಗಿ ತನಿಖಾ ಆಯೋಗ ದಿನಾಂಕ ೨೪–೩–೧೯೮೩ರ ಆದೇಶ ಸಂಖ್ಯೆ. ಎಚ್‌ಡಿ ೮ ಪಿಸಿಇ ೮೩.	ಬಳ್ಳಾರಿಯಲ್ಲಿ ನಡೆದ ಗೋಲಿಬಾರ್ ಬಗ್ಗೆ ವಿಚಾರಣೆ ನಡೆಯಿಸಲು	ಸಲ್ಲಿಸಿದೆ.	೮೨,೪೨೦–೦೦
೨	ಸ್ಥಳೀಯ ಆರ್ಥಿಕ ಆಯೋಗ ದಿನಾಂಕ. ೨೨–೭–೧೯೮೩ರ ಆದೇಶ ಸಂಖ್ಯೆ. ಎಫ್‌ಡಿ ೪೦ ಪಿಸಿಸಿ ೮೩ರಲ್ಲಿ ನೇಮಿಸಿತು. ಫಾದರ್ ಜೇಕಬ್ ಅವರು ಅಧ್ಯಕ್ಷೆ ರಾಗಿದ್ದರು.	ಸ್ಥಳೀಯ ಸಂಸ್ಥೆಯ ಆರ್ಥಿಕ ಸಮಸ್ಯೆಯನ್ನು ಪರಿಶೀಲಿಸುವುದಕ್ಕಾಗಿ.	ಸಲ್ಲಿಸಿದೆ.	೭,೫೭,೨೧೯–೦೦
೩	ಡಾ. ಮಹಿಷಿ ಸಮಿತಿ ದಿ.೪–೮–೮೩ ರಂದು ನೇಮಿಸಿದೆ.	ಕನ್ನಡಿಗರಿಗೆ ಸರ್ಕಾರಿ ಉದ್ಯೋಗದಲ್ಲಿ ಉದ್ಯೋಗದ ಅವಕಾಶದ ಬಗ್ಗೆ	ಸಲ್ಲಿಸಿದೆ.	೬,೪೦,೯೭೫–೦೦
೪	ಪಿ.ಕೆ. ಶ್ಯಾಮಸುಂದರ್ ತನಿಖಾ ಆಯೋಗ ದಿನಾಂಕ ೨೯–೮–೮೩ರ ಆದೇಶ ಸಂಖ್ಯೆ ಎಚ್‌ಡಿ೩೫ ಪಿಸಿಇ ೮೩.	ಮಾಲೂರಿನಲ್ಲಿ ನಡೆದ ಗೋಲಿಬಾರಿನ ಬಗ್ಗೆ ವಿಚಾರಣೆ ನಡೆಯಿಸಲಂ	ಸಲ್ಲಿಸಿದೆ	೪೨,೩೩೦–೦೨
೫	ಎ. ಪಿ. ಬಾಲಸುಬ್ರಮಣ್ಯಮ್ ತನಿಖಾ ಆಯೋಗ ದಿನಾಂಕ ೨೯–೮–೧೯೮೩ರ ಆದೇಶ ಸಂಖ್ಯೆ. ಎಚ್‌ಡಿ ೫೦ ಪಿಸಿಇ ೮೩.	ಕೆ. ಜಿ. ಎಫ್. ನಲ್ಲಿ ನಡೆದ ಗೋಲಿಬಾರ್ ಬಗ್ಗೆ ವಿಚಾರಣೆ ನಡೆಯಿಸಲು	ಸಲ್ಲಿಸಿದೆ.	೫೮,೨೦೦.೦೦
೬	ಜಸ್ಟೀಸ್ ಆರ್. ಜಿ. ದೇಸಾಯಿ ಆಯೋಗ ದಿನಾಂಕ ೮–೧೧–೮೩ರ ಆದೇಶ ಸಂಖ್ಯೆ. ಎಚ್‌ಯುಪಿ ೨೮೧ ಎಂಎನ್‌ವೈ ೮೩.	ಗಂಗಾರಾಮ್ ಕಟ್ಟಿಡ ಕಂಪಿತದ ಬಗ್ಗೆ.	ಸಲ್ಲಿಸಿದೆ.	೪೮,೧೭೪–೮೦
೭	ವೆಂಕಟಸ್ವಾಮಿ ತನಿಖಾ ಆಯೋಗ ದಿನಾಂಕ ೧೮–೨–೧೯೮೪ರ ಆದೇಶ ಸಂಖ್ಯೆ. ಸಿಐ ೨೦೭ ಎಸ್‌ಎನ್‌ಎಂ ೮೧.	ಲೇವಿ ಸಿಮೆಂಟನ್ನು ವಿಲೆರಿಸುವಾಗ ಉಂಟಾದ ಅಕ್ರಮಗಳ ಬಗ್ಗೆ ವಿಚಾರಣೆ ನಡೆಯಿಸಲು	ಸಲ್ಲಿಸಿದೆ	೨,೬೭,೬೩೭–೫೨

೧	೨	೩	೪	೫
೮	ನ್ಯಾಯಮೂರ್ತಿ ವೆಂಕಟಸ್ವಾಮಿ ತನಿಖಾ ಆಯೋಗ ದಿನಾಂಕ ೨೪-೪-೧೯೮೪ರ ಆದೇಶ ಸಂಖ್ಯೆ. ಎಫ್ ಎಫ್‌ಡಿ ೪೧೭ ಎಫ್‌ಇಟಿಐ.	ಹೊರ ರಾಜ್ಯಕ್ಕೆ ಅಕ್ಕಿ ಬತ್ತ ವನ್ನು ಸಾಗಿಸುವುದಕ್ಕೆ ಅಪೇಕ್ಷಣಾ ರಹಿತ ಪತ್ರಗಳನ್ನು ಕೊಟ್ಟ ಬಗ್ಗೆ.	ಸಲ್ಲಿಸಿದೆ	೨,೬೭,೬೩೭-೪೪
೯	ಎನ್. ಡಿ. ವೆಂಕಟೇಶ್ ತನಿಖಾ ಆಯೋಗ ದಿನಾಂಕ ೨೧-೫-೧೯೮೪ರ ಪತ್ರದ ಸಂಖ್ಯೆ. ಎಚ್‌ಡಿ ೭ ಪಿಸಿಇ ೮೪.	ಶ್ರೀ ಉಗ್ರ ನರಸಿಂಹಪ್ಪ ಅವರ ಅಪಹರಣದ ಬಗ್ಗೆ ತನಿಖೆ ನಡೆಯಿಸಲು.	ಇಲ್ಲ	೪೪,೦೦೦-೦೦
೧೦	ಮಾನ್ಯ ಕಾರ್ಮಿಕ ಸಚಿವರ ಅಧ್ಯಕ್ಷತೆಯಲ್ಲಿ ಸಲಹಾ ಮಂಡಳಿ ದಿನಾಂಕ ೭-೬-೧೯೮೪ರ ಆದೇಶ ಸಂಖ್ಯೆ ಎಸ್‌ಡಬ್ಲ್ಯೂಎಲ್ ೧೫೬ ಎಲ್‌ಡಬ್ಲ್ಯೂಇ ೮೨.	ಬಾಲ ಕಾರ್ಮಿಕರ ಕಲ್ಯಾಣ ಕ್ಕಾಗಿ ಕಾನೂನಿನ ಕ್ರಮಗಳನ್ನು ಸೂಚಿಸಲು.	ಸಲ್ಲಿಸಿಲ್ಲ	೭೦-೦೦
೧೧	ಆರ್.ಜಿ. ವೈದ್ಯನಾಥ್ ತನಿಖಾ ಆಯೋಗ ದಿನಾಂಕ ೧೬-೬-೮೪ರ ಆದೇಶ ಸಂಖ್ಯೆ. ಎಚ್‌ಡಿ ೩೨ ಪಿಸಿಇ ೮೪	ಹುಬ್ಬಳ್ಳಿಯಲ್ಲಿ ನಡೆದ ಪೊಲೀಸ್ ಗೋಳಿ ಬಾರಿನ ಬಗ್ಗೆ.	ಸಲ್ಲಿಸಿದೆ	೪೦,೦೦೦-೦೦
೧೨	ಜಸ್ಟೀಸ್ ವೆಂಕಟೇಶ್ ಪಾಟೀಲ್ ಆಯೋಗ ದಿನಾಂಕ ೪-೭-೮೪ರ ಆದೇಶ ಸಂಖ್ಯೆ. ಇಡಿ ೬೨ ಟಿಪಿಯು	೨ನೇ ವರ್ಷದ ಪಿ.ಯು.ಸಿ. ಪರೀಕ್ಷೆಯ ಪ್ರಶ್ನೆ ಪತ್ರಿಕೆ ಕಳುವಾದ ಬಗ್ಗೆ.	ಇಲ್ಲ	–
೧೩	ಪಿ.ಎ.ಕುಲಕರ್ಣಿ ತನಿಖಾ ಆಯೋಗ ದಿನಾಂಕ ೨೧-೭-೧೯೮೪ರ ಆದೇಶ ಸಂಖ್ಯೆ. ಎಚ್‌ಡಿ ೪೩ ಪಿಸಿಇ ೮೪	ಬೆಂಗಳೂರಿನಲ್ಲಿ ನಡೆದ ಗೋಳಿಬಾರ್ ಬಗ್ಗೆ ತನಿಖಾ ನಡೆಯಿಸಲು.	ಇಲ್ಲ	೫೦,೦೦೦-೦೦
೧೪	ಡಿ.ಪಿ.ಹಿರೇಮಠ ತನಿಖಾ ಆಯೋಗ ದಿನಾಂಕ. ೮-೮-೧೯೮೪ರ ಆದೇಶ ಸಂಖ್ಯೆ. ಎಚ್‌ಡಿ ೪೩ ಪಿಸಿಇ ೮೪.	ಹುನಗುಂದದಲ್ಲಿ ನಡೆದ ಪೊಲೀಸ್ ಗೋಲಿಬಾರಿನ ಬಗ್ಗೆ.	ಸಲ್ಲಿಸಿದೆ	೨೧,೦೦೨-೦೦
೧೫	ಎ.ಬಿ. ಮುರಗೋಡ್ ತನಿಖಾ ಆಯೋಗ ದಿನಾಂಕ. ೨೦-೪-೮೫ರ ಆದೇಶ ಸಂಖ್ಯೆ. ಎಚ್‌ಡಿ ೧೧ ಪಿಸಿಇ ೮೫.	ಹೊನ್ನಾಳಿಯಲ್ಲಿ ನಡೆದ ಪೊಲೀಸ್ ಗೋಳಿಬಾರಿನ ಬಗ್ಗೆ.	ಸಲ್ಲಿಸಿದೆ	೨೪,೦೦೦-೦೦
೧೬	ಪಿ.ಪಿ ಬೋಪಣ್ಣ ತನಿಖಾ ಆಯೋಗ ದಿನಾಂಕ. ೧೦-೭-೮೫ರ ಆದೇಶ ಸಂಖ್ಯೆ. ಎಚ್‌ಡಿ ೨೧ ಪಿಸಿಇ ೮೫.	ಶುದ್ಧೀಕರಣ ಸ್ಪರಿಟನ್ನು ರಾಜ್ಯದ ಹೊರಗಡೆ ಕಳಿಸುವ ಬಗ್ಗೆ.	ಇಲ್ಲ	೩೫,೦೦೦-೦೦
೧೭	ಶ್ರೀಮತಿ ನಂದನಾ ರೆಡ್ಡಿಯವರ ಅಧ್ಯಕ್ಷತೆಯಲ್ಲಿ ವಿಚಾರಣಾ ಸಮಿತಿ ದಿನಾಂಕ. ೨೯-೧೦-೮೫ರ ಆದೇಶ ಸಂಖ್ಯೆ. ಎಸ್‌ಡಬ್ಲ್ಯೂಎಲ್ ೩೯ ಎಲ್‌ಬಿಡಬ್ಲ್ಯೂ ೮೫.	ಬಾಲ ಕಾರ್ಮಿಕರ ಶೋಷಣೆಯ ಬಗ್ಗೆ.	ಸಲ್ಲಿಸಿದೆ	೯,೯೭೨-೪೦

೧	೨	೩	೪	೫
೧೮	ನ್ಯಾಯಮೂರ್ತಿ ಆರ್. ಜಿ ದೇಸಾಯಿ ಆಯೋಗ ದಿನಾಂಕ. ೨೯-೧೦-೮೫ರ ಆದೇಶ ಸಂಖ್ಯೆ. ಲಾ ೬೨ ಎಲ್‌ಜಿಆರ್ ೮೪.	ಶ್ರೀ ಮೊಯ್ಲಿ ಹಾಗೂ ಶ್ರೀ ಬೈರೆಗೌಡ ಅವರ ಟೇಪ್ ಪ್ರಕರಣದ ಕುರಿತು.	ಇಲ್ಲ	೧೧.೮೨೬-೨೦
೧೯	ಜಸ್ಟೀಸ್ ಕೆ. ಎಸ್. ಪುಟ್ಟಸ್ವಾಮಿ ಆಯೋಗ ದಿನಾಂಕ. ೨೨-೧೧-೮೫ರ ಆದೇಶ ಸಂಖ್ಯೆ. ಎಚ್ ಎಫ್ ಡಬ್ಲ್ಯೂ ೨೧೭ ಎಸ್‌ಎಂಎಫ್ ೮೫.	ಶ್ರೀ ಭರತ್ ಹೆಗಡೆಯವರ ಮೆಡಿಕಲ್ ಸ್ನಾತಕೋತ್ತರ ಸೀಟನ್ನು ಕೊಡಿಸುವ ಬಗ್ಗೆ	ಇಲ್ಲ	೨೦,೬೩೧-೨೫
೨೦	ಬಾಗೂರು ಸಮಿತಿ ವಿಚಾರಣಾ ಆಯೋಗವು ದಿನಾಂಕ. ೨೭-೧೧-೮೫ರಂದು ಪ್ರಕಟಣೆ ಸಂಖ್ಯೆ. ಜಿಡಬ್ಲ್ಯೂಡಿ ೧೪೮ ಎನ್‌ಎಚ್‌ಸಿ ೮೫ ನೇಮಿಸಲ್ಪಟ್ಟಿದೆ	ಹೆಚ್ಚುವರಿ ಹಣವನ್ನು ಸಂದಾಯ ಮಾಡಿದ್ದರ ಬಗ್ಗೆ ತನಿಖೆಗೆ ನಡೆಯಿಸಲು.	ಇಲ್ಲ	೨೫,೧೭೪-೦೦
೨೧	ವೇತನ ಆಯೋಗ ನ್ಯಾಯಮೂರ್ತಿ ವೆಂಕಟಸ್ವಾಮಿ ಅಧ್ಯಕ್ಷತೆಯಲ್ಲಿ ದಿನಾಂಕ ೨೩-೧-೮೬ರಂದು ನೇಮಿಸಿತು.	ಸರ್ಕಾರಿ ನೌಕರರ ವೇತನ ಪರಿಷ್ಕರಣಕ್ಕಾಗಿ.	ಸಲ್ಲಿಸಿದೆ	೧೧,೨೫.೦೦೦-೦೦
೨೨	ಜೆ ಕೆ.ಪಿ. ಕಂಡೆತ್ ಅವರ ಅಧ್ಯಕ್ಷತೆಯಲ್ಲಿ ಜೂನ್ ೮೬ರಂದು ಕರ್ನಾಟಕ ರೇಸಿಂಗ್ ಆಯೋಗ ನೇಮಿಸಲಾಯಿತು.	ಕರ್ನಾಟಕದಲ್ಲಿ ರೇಸನ್ನು ಆರೋಗ್ಯಕರ ಕ್ರೀಡೆ ಮಾಡಲು ಯಾವ ಕ್ರಮ ತೆಗೆದು ಕೊಳ್ಳುವಂತೆ ವರದಿ ಸಲ್ಲಿಸಲು.	ಇಲ್ಲ	೭೨,೭೧೩-೨೩
೨೩	ಎಸ್.ಬಿ.ಹುಗರ್ ತನಿಖಾ ಆಯೋಗ ದಿನಾಂಕ. ೨೮-೭-೮೬ರ ಆದೇಶ ಸಂಖ್ಯೆ. ಎಚ್‌ಡಿ ೫೧ ಪಿಸಿಇ ೮೬.	ಆಲಂದದಲ್ಲಿ ನಡೆದ ಪೊಲೀಸ್ ಗೋಳಿಬಾರಿನ ಬಗ್ಗೆ.	ಇಲ್ಲ	೫೧,೦೨೦-೦೦
೨೪	ಎಸ್.ವಿ. ಟಿಲಿಗುಲ್ ತನಿಖಾ ಆಯೋಗ ದಿನಾಂಕ. ೨೨-೭-೮೬ರ ಆದೇಶ ಸಂಖ್ಯೆ ಎಚ್‌ಡಿ ೮೮ ಪಿಸಿಇ ೮೬.	ಚನ್ನಪಟ್ಟಣದಲ್ಲಿ ನಡೆದ ಗೋಳಿಬಾರಿನ ಬಗ್ಗೆ.	ಇಲ್ಲ	೪೦,೦೦೨-೦೦
೨೫	ಜೆ ಚನ್ನವೀರಪ್ಪ ತನಿಖಾ ಆಯೋಗ ದಿನಾಂಕ ೪-೯-೮೬ರ ಆದೇಶ ಸಂಖ್ಯೆ. ಎಚ್ ಡಿ ೬೪ ಪಿಸಿಇ ೮೬ (೧೧).	ಚಂದ್ರಗುತ್ತಿಯಲ್ಲಿ ನಡೆದ ಬೆತ್ತಲೆ ಸೇವೆ ಬಗ್ಗೆ.	ಇಲ್ಲ	೩೭,೦೦೦-೦೦
೨೬	ಡಿ. ಪಿ. ಹೀರೆಮಠ ತನಿಖಾ ಆಯೋಗ ದಿನಾಂಕ ೧೧-೯-೮೬ರ ಆದೇಶ ಸಂಖ್ಯೆ. ಎಚ್‌ಡಿ ೫೯ ಪಿಸಿಇ ೮೬.	ರಾಮನಗರದಲ್ಲಿ ನಡೆದ ಗೋಳಿಬಾರಿನ ಬಗ್ಗೆ.	ಇಲ್ಲ	೪೦,೦೦೨-೦೦

ಅನುಬಂಧ—೨

ಸರ್ಕಾರವು ೧೯೮೩ರ ಮಾರ್ಚ್ ೧ರಿಂದ ೧೯೮೬ರ ಡಿಸೆಂಬರ್ ೩೧ರವರೆಗೆ ೨೦ ವಿಚಾರಣಾ ಆಯೋಗಗಳನ್ನು ಹಾಗೂ ೪ ಅಧ್ಯಯನ ಸಮಿತಿಗಳನ್ನು ರಚಿಸಿದ ಅವುಗಳಲ್ಲಿ ಈ ಕೆಳಗೆ ಕಾಣಿಸಿರುವ ೧೧ ವಿಚಾರಣಾ ಆಯೋಗಗಳು ಹಾಗೂ ೪ ಅಧ್ಯಯನ ಸಮಿತಿಗಳು ತಮ್ಮ ವರದಿಯನ್ನು ಸಲ್ಲಿಸಿದೆ.—

ವಿಚಾರಣಾ ಆಯೋಗಗಳು.—

೧ ಎಸ್. ಎಂ. ಬ್ಯಾಡಗಿ ಆಯೋಗ: (೧೯೮೩ರ ಫೆಬ್ರುವರಿಯಲ್ಲಿ ಬಳ್ಳಾರಿಯಲ್ಲಿ ನಡೆದ ಗೋಲಿಬಾರಿನ ಬಗ್ಗೆ)

೨ ಶ್ರೀ ಎ. ಬಿ. ಬುರುಗೋಡ್ ಆಯೋಗ: ಹೊನ್ನಾಳಿಯಲ್ಲಿ ನಡೆದ ಗೋಲಿಬಾರಿನ ಬಗ್ಗೆ

೩ ಪಿ.ಕೆ. ಶ್ಯಾಮಸುಂದರ್ ಆಯೋಗ: ಮೂಲೂರಿನಲ್ಲಿ ದಿನಾಂಕ ೧೩–೫–೧೯೮೩ ರಂದು ನಡೆದ ಗೋಲಿಬಾರಿನ ಬಗ್ಗೆ.

೪ ಶ್ರೀ ಎ. ವಿ. ಬಾಲಸುಬ್ರಮಣ್ಯಮ್ ಆಯೋಗ: ದಿನಾಂಕ ೨–೮–೧೯೮೩ರಂದು ಕೆ.ಜಿ.ಎಫ್.ನಲ್ಲಿ ನಡೆದ ಗೋಲಿಬಾರಿನ ಬಗ್ಗೆ

೫ ನ್ಯಾಯಮೂರ್ತಿ ಆರ್.ಬಿ. ದೇಸಾಯಿ ಆಯೋಗ: ಸಿಮೆಂಟನ್ನು ವಿತರಣೆ ಮಾಡುವಾಗ ನಡೆದ ವ್ಯವಹಾರದ ಬಗ್ಗೆ

೬ ನ್ಯಾಯಮೂರ್ತಿ ವೆಂಕಟಸ್ವಾಮಿ ಆಯೋಗ: ಸಿಮೆಂಟನ್ನು ವಿತರಣೆ ಮಾಡುವಾಗ ನಡೆದ ಅವ್ಯವಹಾರದ ಬಗ್ಗೆ

೭ ನ್ಯಾಯಮೂರ್ತಿ ವೆಂಕಟಸ್ವಾಮಿ ಆಯೋಗ: ಹೊರ ರಾಜ್ಯಗಳಿಗೆ ಭತ್ತವನ್ನು ಸಾಗಿಸಲು ನಿರಾಕ್ಷೇಪಣಾ ಪತ್ರಗಳನ್ನು ಕೊಟ್ಟ ಬಗ್ಗೆ

೮ ನ್ಯಾಯಮೂರ್ತಿ ಪಿ. ಪಿ. ಬೊಪ್ಪಣ್ಣ ಆಯೋಗ: ಶುದ್ಧೀಕರಿಸಿದ ಸ್ಪಿರಿಟನ್ನು ರಾಜ್ಯದ ಹೊರಗಡೆ ಕಳಿಸಿದ ಬಗ್ಗೆ

೯ ಜೆ. ಚನ್ನವೀರಪ್ಪ ಆಯೋಗ: ಚಂದ್ರಗುತ್ತಿಯಲ್ಲಿ ನಡೆದ ಬೆತ್ತಲೆ ಸೇವೆ ಬಗ್ಗೆ

೧೦ ಆರ್. ಬಿ. ವೈದ್ಯನಾಥ ಆಯೋಗ: ದಿನಾಂಕ ೪–೬–೧೯೮೪ ರಂದು ಹುಬ್ಬಳ್ಳಿಯಲ್ಲಿ ನಡೆದ ಗೋಲಿಬಾರಿನ ಬಗ್ಗೆ

೧೧ ಶ್ರೀ ಡಿ. ಪಿ. ಹಿರೇಮಠ ಆಯೋಗ: ದಿನಾಂಕ ೨೬–೭–೧೯೮೪ ರಂದು ಹುನಗುಂದದಲ್ಲಿ ನಡೆದ ಗೋಲಿಬಾರಿನ ಬಗ್ಗೆ

ಅಧ್ಯಯನ ಸಮಿತಿಗಳು

೧ ಡಾ. ಪರೋಜಿನಿ ಮುಹಿಪಿ ಅಧ್ಯಯನ ಸಮಿತಿ.—ಕೇಂದ್ರ ಸರ್ಕಾರದ ಉದ್ಯಮಗಳಲ್ಲಿ ಕನ್ನಡಿಗರಿಗೆ ಉದ್ಯೋಗ ಅವಕಾಶ ದೊರಕಿಸುವ ಬಗ್ಗೆ

೨ ನ್ಯಾಯಾಧೀಶ ವೆಂಕಟಸ್ವಾಮಿ ವೇತನ ಪರಿಷ್ಕರಣಾ ಆಯೋಗ, ರಾಜ್ಯ ಸರ್ಕಾರದ ನೌಕರರಿಗೆ ವೇತನವನ್ನು ಪರಿಷ್ಕರಿಸುವ ಬಗ್ಗೆ.

೩ ಸ್ಥಳೀಯ ಆರ್ಥಿಕ ಆಯೋಗ, ಸ್ಥಳೀಯ ಸಂಸ್ಥೆಗಳಿಗೆ ಆರ್ಥಿಕ ಸಹಾಯದ ಬಗ್ಗೆ

೪ ಶ್ರೀಮತಿ ನಂದಿನಿ ರೆಡ್ಡಿ ಇವರ ಅಧ್ಯಕ್ಷತೆಯಲ್ಲಿ ವಿಚಾರಣಾ ಸಮಿತಿ – ಬಾಲ ಕಾರ್ಮಿಕರ ಶೋಷಣೆಯ ಬಗ್ಗೆ

೧ ಎಸ್. ಎಂ. ಬ್ಯಾಡಗಿ ಆಯೋಗ.

ದಿನಾಂಕ ೨೪-೩-೧೯೮೩ರ ಸರ್ಕಾರಿ ಆದೇಶ ಕ್ರಮಾಂಕ ಎಚ್‌ಡಿ ೮ ಪಿಸಿಇ ೮೩ರಲ್ಲಿ ಫೆಬ್ರುವರಿ ೧೯೮೩ರಲ್ಲಿ ಬಳ್ಳಾರಿಯಲ್ಲಿ ನಡೆದ ಗೋಳಿಬಾರಿನ ಬಗ್ಗೆ ವಿಚಾರಣೆ ನಡೆಯಿಸಲು ನೇಮಿಸಲಾಯಿತು. (ಆಯೋಗವು ತನ್ನ ವರದಿಯಲ್ಲಿ ಪೊಲೀಸರು ಉಪಯೋಗಿಸಿದ ಬಲವನ್ನು ಸಮರ್ಥಿಸಿಲ್ಲ. ಸರ್ಕಾರವು ವರದಿಯನ್ನು ಒಪ್ಪಿ ಪೊಲೀಸ್ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಲಾಗಿದೆ. ೩ ಪೊಲೀಸ್ ಹಾಗೂ ಒಬ್ಬ ಮಾಜಿ ಪೊಲೀಸರನ್ನು ಈಗಾಗಲೇ ಸೇವೆಯಿಂದ ತೆಗೆದು ಹಾಕಲಾಗಿದೆ. ಮತ್ತೊಬ್ಬ ಪೊಲೀಸಿನ ವಿಷಯವಾಗಿ ಅವನ ವಾರ್ಷಿಕ ಸಂಬಳ ಮುಂಬಡತಿಯನ್ನೂ ೬ ತಿಂಗಳವರೆಗೆ ಮುಂದೂಡಲಾಗಿದೆ. ಒಬ್ಬ ಜಿಲ್ಲಾ ಪೊಲೀಸ್ ಅಧಿಕಾರಿ ಹಾಗೂ ಒಬ್ಬ ಉಪ ಜಿಲ್ಲಾ ಪೊಲೀಸ್ ಅಧಿಕಾರಿಗಳ ವಿಚಾರಣೆಯು ಮುಂದುವರೆದಿದೆ.

೨ ಎ.ಬಿ. ಮುಂರಗೋಡ್ ಆಯೋಗ.

ದಿನಾಂಕ ೨೦-೪-೧೯೮೩ರ ಆದೇಶ ಸಂಖ್ಯೆ, ಎಚ್‌ಡಿ ೧೧ ಪಿಸಿಇ ೮೩ರಲ್ಲಿ ಶಿವಮೊಗ್ಗ ಜಿಲ್ಲೆಯ ಹೊನ್ನಾಳಿಯಲ್ಲಿ ನಡೆದ ಗೋಳಿಬಾರಿನ ಬಗ್ಗೆ ವಿಚಾರಣೆ ಮಾಡುವುದಕ್ಕಾಗಿ ಆಯೋಗವನ್ನು ನೇಮಿಸಲಾಯಿತು, ದಿನಾಂಕ ೩೦-೮-೮೬ರಂದು ಆಯೋಗವು ತನ್ನ ವರದಿಯನ್ನು ಸಲ್ಲಿಸಿದೆ ಮತ್ತು ಅದನ್ನು ಸರ್ಕಾರವು ಅಂಗೀಕರಿಸಿದೆ.

ಆಯೋಗವು ಪೊಲೀಸು ಗೋಳಿಬಾರನ್ನು ಸಮರ್ಥಿಸಿದೆ. ವಿಚಾರಣಾ ಆಯೋಗವು ನೀಡಿರುವ ಸಂಗತಿಗಳ ಬೆಳಕಿನಲ್ಲಿ ತಾಲ್ಲೂಕು ಕಾರ್ಯನಿರ್ವಾಹಕ ದಂಡಾಧಿಕಾರಿಯವರಿಗೆ ದಂಡ ಪ್ರಕ್ರಿಯಾ ಸಂಹಿತೆಯ ಉಪಬಂಧಗಳ ಪ್ರಕಾರ ಮೇಲಿನ ಸಂಗತಿಗಳ ಸಂದರ್ಭದಲ್ಲಿ ಹೇಗೆ ಕಾರ್ಯ ನಿರ್ವಹಿಸ ಬೇಕೆಂಬ ಬಗ್ಗೆ ಸಾಕಷ್ಟು ತರಬೇತಿ ನೀಡುವಂತೆ ಶಿಫಾರಸ್ಸು ಮಾಡಿದೆ.

ಹೊನ್ನಾಳಿಯಲ್ಲಿ ದಿನಾಂಕ. ೬-೩-೧೯೮೩ರಂದು ನಡೆದ ಗೋಳಿಬಾರಿನ ಮರಣ ಹೊಂದಿದ ಶ್ರೀ ತಿಮ್ಮಯ್ಯ ಇವರ ಪತ್ನಿಯಾದ ಶ್ರೀಮತಿ ಹಳದಮ್ಮ ಇವರಿಗೆ ಮುಂಜೂರು ಮಾಡಿದ ೭,೫೦೦-೦೦ ರೂಗಳ ಪರಿಹಾರ ಧನವನ್ನು ಇತೀಚಿನ ಆದೇಶ ದಿನಾಂಕ ೩೦-೭-೧೯೮೬ರ ಪ್ರಕಾರ ೨೦,೦೦೦-೦೦ ರೂಗಳಿಗೆ ಹೆಚ್ಚಿಸಲಾಗಿದೆ. ಆಯೋಗದ ಶಿಫಾರಸ್ಸಿನ ಮೇಲೆ ಕ್ರಮವನ್ನು ಕ್ರಮೇಣ ಕೈಗೊಳ್ಳಲಾಗುವುದು.

೩ ಪಿ. ಕೆ. ಶ್ಯಾಮಸುಂದರ ಆಯೋಗ.

ದಿನಾಂಕ. ೨೯-೬-೧೯೮೩ರ ಆದೇಶ ಸಂಖ್ಯೆ, ಎಚ್‌ಡಿ ೩೧ ಪಿಸಿಇ ೮೩ರಲ್ಲಿ ಮಾಲೂರಿನಲ್ಲಿ ದಿನಾಂಕ ೧೩-೫-೧೯೮೩ರಂದು ನಡೆದ ಗೋಳಿಬಾರಿನ ವಿಚಾರಣೆಗಾಗಿ ಆಯೋಗವನ್ನು ನೇಮಿಸಲಾಯಿತು. ಆಯೋಗವು ತನ್ನ ವರದಿಯನ್ನು ಕೊಟ್ಟಿದೆ ಹಾಗೂ ಉಪಯೋಗಿಸಿದ ಬಲವು ಅತಿಯಾಯಿತು ಎಂದು ಅಭಿಪ್ರಾಯ ಪಟ್ಟಿದೆ. ಸರಕಾರವು ವರದಿಯನ್ನು ಅಂಗೀಕರಿಸಿದೆ. ಪೊಲೀಸ್ ಇಲಾಖೆಯ ಅಧಿಕಾರಿಗಳ ಮೇಲೆ ಕ್ರಮ ಆರಂಭಿಸಿದೆ. ಪರಾತ್ತು ಉಪ ಜಿಲ್ಲಾ ಪೋಲಿಸ್ ಅಧಿಕಾರಿ ವೃತ್ತ ಇನ್ಸ್‌ಪೆಕ್ಟರ್ ಹಾಗೂ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಅವರ ಮೇಲೆ ಜಂಟೀ ವಿಚಾರಣೆ ನಡೆಸಲಾಗುತ್ತಿದೆ. ಅಲ್ಲದೇ ಎ.ಐ.ಎಸ್. (ಡಿ ಹಾಗೂ ಎ) ನಿಯಮಗಳ ಅಡಿಯಲ್ಲಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧಿಕಾರಿಗಳಿಗೆ ನೋಟೀಸನ್ನು ಕೊಡಲಾಗಿದೆ ಉಪ ವಿಭಾಗದ ಮ್ಯಾಜಿಸ್ಟ್ರೇಟ್ ಕೊಲಾರ ಅವರಿಗೆ ಕೆ.ಸಿ.ಎಸ್. (ಸಿ.ಸಿ.ಎ.) ನಿಯಮ ೧೨ರ ಅಡಿಯಲ್ಲಿ ನೋಟೀಸನ್ನು ಕೊಡಲಾಗಿದೆ.

೪ ಶ್ರೀ ಎ. ಪಿ. ಬಾಲಸುಬ್ರಮಣ್ಯಮ್ ಆಯೋಗ.

ದಿನಾಂಕ ೨೯-೮-೧೯೮೩ರ ಆದೇಶ ಸಂಖ್ಯೆ, ಎಚ್.ಡಿ. ೫೦ ಪಿಸಿಇ ೮೩ರಲ್ಲಿ ದಿನಾಂಕ ೨-೮-೮೩ರಂದು ಕೆ.ಜಿ ಎಫ್‌ನಲ್ಲಿ ನಡೆದ ಗೋಳಿಬಾರಿನ ವಿಷಯವಾಗಿ ವಿಚಾರಣಾ ಆಯೋಗವನ್ನು ನೇಮಿಸಲಾಗಿದೆ. ಆಯೋಗವು ಪೊಲೀಸ್ ಗೋಳಿಬಾರಿನ ಅವಶ್ಯಕತೆಯನ್ನು ಸಮರ್ಥಿಸಿದೆ ಆದರೆ ಪೊಲೀಸರ್

ಉಪಯೋಗಿಸಿದ ಬಲವು ಹೆಚ್ಚಾಗಿತ್ತು ಎಂದು ಆಯೋಗವು ಅಭಿಪ್ರಾಯ ಪಟ್ಟಿದೆ. ವಿಚಾರಣಾ ಆಯೋಗದ ವರದಿಯ ಪ್ರಕಾರ ಜಿಲ್ಲಾ ಪೊಲೀಸ್ ಅಧಿಕಾರಿ ಉಪ ಜಿಲ್ಲಾ ಪೊಲೀಸ್ ಅಧಿಕಾರಿ ಮತ್ತು ಇಬ್ಬರು ವೃತ್ತ ಪೊಲೀಸ್ ಅಧಿಕಾರಿಗಳ ಮೇಲೆ ಕೆ.ಸಿ.ಎಸ್. (ಸಿ.ಸಿ.ಎ) ನಿಯಮಂದ ಪ್ರಕಾರ ಕ್ರಮ ಜರಂಗಿಸಲಾಗುತ್ತಿದೆ.

೫ ಆರ್. ಬಿ. ದೇಸಾಯಿ ಆಯೋಗ.

ದಿನಾಂಕ೧೨-೯-೧೯೮೫ರಂದು ಗಂಗಾರಾಮ್ ಕಟ್ಟಡ ಕುಸಿದುಬಿದ್ದ ವಿಚಾರಣೆ ಮಾಡಲು ಆದೇಶ ಸಂಖ್ಯೆ. ಎಚ್‌ಯುಡಿ ೨೮೧ ಎಂಎಸ್‌ವೈ ೮೫ ದಿನಾಂಕ ೮-೧೧-೧೯೮೫ರಲ್ಲಿ ವಿಚಾರಣಾ ಆಯೋಗವನ್ನು ನೇಮಿಸಲಾಯಿತು. ವಿಚಾರಣಾ ಆಯೋಗವು ತನ್ನ ದಿನಾಂಕ. ೨೬-೭-೧೯೮೫ರ ವರದಿಯಲ್ಲಿ ಶಿಲ್ಪ ಕಟ್ಟಡ ಅಭಿಯಂತರ ಗುತ್ತಿಗೆದಾರ ಹಾಗೂ ಯಜಮಾನರ ಕರ್ತವ್ಯಪಾಲನೆ ಲೋಪವಿದೆ ಅಲ್ಲದೇ ಕೆಲವು ನಗರಪಾಲಿಕೆ ಅಧಿಕಾರಿಗಳು ಸರಿಯಾದ ಕ್ರಮವನ್ನು ಪಾಲಿಸಲು ಒತ್ತಾಯಿಸಲಿಲ್ಲ ಎಂದು ವರದಿ ಮಾಡಿದೆ ಸರ್ಕಾರವು ಶಿಲ್ಪ ಕಟ್ಟಡ ಅಭಿಯಂತರ ಗುತ್ತಿಗೆದಾರ ಮತ್ತು ಮಾಲೀಕನ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಲು ಆದೇಶಿಸಿದೆ. ಅಲ್ಲದೇ ಸರ್ಕಾರವು ಆಗಿನ ನಗರ ಸಭಾ ಆಯುಕ್ತರ ಮೇಲೆ ಎಐಎಸ್ (ಡಿ ಹಾಗೂ ಎ) ನಿಯಮದ ಪ್ರಕಾರ ಶಿಸ್ತಿನ ಕ್ರಮ ಜರುಗಿಸಲಾಗುತ್ತಿದೆ. ಅಂದಿನ ಮೇಲ್ವಿಚಾರಕ ಅಭಿಯಂತರರ ಮೇಲೆ ವಿಚಾರಣೆ ಮುಂದಿದ್ದು ಅವರಿಗೆ ಒಂದು ವರ್ಷದ ಬಡ್ತಿಯನ್ನು ನಿಲ್ಲಿಸಿದೆ. ಸಂಬಂಧ ಪಟ್ಟ ಇತರ ನಗರ ಪಾಲಿಕೆಯ ಅಧಿಕಾರಿಗಳ ಮೇಲೆ ನಗರಸಭಾ ಆಯುಕ್ತರು ಕ್ರಮ ತೆಗೆದುಕೊಳ್ಳುತ್ತಿದ್ದಾರೆ.

೬ ನ್ಯಾಯಮೂರ್ತಿ ವೆಂಕಟಸ್ವಾಮಿ ಆಯೋಗ.

ದಿನಾಂಕ ೧೮-೨-೧೯೮೪ರ ಆದೇಶ ಸಂಖ್ಯೆ. ಕಿಐ ೨೦೭ ಎಸ್‌ಎನ್‌ಎಂ ೮೧ರಲ್ಲಿ ಸಿಮೆಂಟನ್ನು ನಿಗದಿ ಮಾಡುವಾಗ ಮತ್ತು ವಿತರಣೆ ಮಾಡುವಾಗ ನಡೆದ ಅವ್ಯವಹಾರದ ಬಗ್ಗೆ ವಿಚಾರಣೆ ಮಾಡಲು ಆಯೋಗವನ್ನು ನೇಮಿಸಲಾಯಿತು. ಆಯೋಗದ ವರದಿಯನ್ನು ದಿನಾಂಕ. ೧೭-೬-೧೯೮೫ರಂದು ಸಚಿವ ಸಂಪುಟವು ಒಪ್ಪಿದೆ. ಆಯೋಗವು ಅಂದಿನ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳಾದ ಶ್ರೀ ಮಾಣಿಕ್‌ರಾವ್ ಪಾಟೀಲ್‌ರವರು ಪರೋಕ್ಷವಾಗಿ ಪ್ರಧಾನ ಜವಾಬ್ದಾರರೆಂದು ಪರಿಗಣಿಸಿದೆ. ಆಯೋಗದ ವರದಿಯನ್ನು ಉಭಯ ವಿಧಾನ ಮಂಡಲದ ಸದನಗಳಲ್ಲಿ ಇಷ್ಟರಲ್ಲಿಯೇ ಮಂಡಿಸಲಾಗುವುದು.

೭ ನ್ಯಾಯಮೂರ್ತಿ ವೆಂಕಟಸ್ವಾಮಿ ಆಯೋಗ.

ಸರ್ಕಾರಿ ಆದೇಶ ಸಂಖ್ಯೆ ಎಫ್‌ಎಫ್‌ಡಿ ೧೦೭ ಎಫ್‌ಇಟಿ ೮೨ ದಿನಾಂಕ ೪-೪-೧೯೮೪ರಲ್ಲಿ ನ್ಯಾಯ ಮೂರ್ತಿ ಶ್ರೀ ವೆಂಕಟಸ್ವಾಮಿ ಆಯೋಗವನ್ನು ಹೊರ ರಾಜ್ಯಗಳಿಗೆ ಅಕ್ಕಿ, ಭತ್ತವನ್ನು ಮತ್ತು ನುಚ್ಚು ಅಕ್ಕಿಯನ್ನು ಸಾಗಿಸಲು ನಿರಾಕ್ಷೇಪಣಾ ಪತ್ರಗಳನ್ನು ಕೊಟ್ಟ ಬಗ್ಗೆ ವಿಚಾರಣೆ ನಡೆಯಿಸಲು ನೇಮಿಸಲಾಯಿತು. ಆಯೋಗವು ದಿನಾಂಕ. ೨೦-೧೨-೧೯೮೫ರಂದು ವರದಿಯನ್ನು ಸಲ್ಲಿಸಿದ್ದು ಅದನ್ನು ಸಚಿವ ಸಂಪುಟವು ದಿನಾಂಕ. ೭-೧-೧೯೮೬ರಂದು ಅಂಗೀಕರಿಸಿದೆ. ಆಯೋಗವು ಮುಖ್ಯವಾಗಿ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ನಿರ್ದೇಶಕರನ್ನು ಸರ್ಕಾರಕ್ಕೆ ಲಿವಿ ಭತ್ತ ಅಥವಾ ಅಕ್ಕಿಯನ್ನು ಕೊಡದಿದ್ದರೂ, ಆಕ್ಷೇಪಣಾ ರಹಿತ ಪತ್ರಗಳನ್ನು ನೀಡುವಂತೆ ಆದೇಶಿಸಿ ಹೊರಡಿಸಿದ ದಿನಾಂಕ ೩೦-೮-೮೨ರ ಸರ್ಕಾರಿ ಪತ್ರವು (ಎಫ್‌ಟಿಡಿ ೧೭೧ ಆರ್‌ಪಿಆರ್ ೮೨) ಅಕ್ರಮವೆಂದೂ ಇದಕ್ಕೆ ಆ ಅವಧಿಯಲ್ಲಿದ್ದ ಈ ಖಾತೆಗೆ ಸಂಬಂಧಿಸಿದ ಸಚಿವರು ಜವಾಬ್ದಾರರೆಂದೂ ನಿರ್ಣಯಿಸಿದೆ.

೮ ನ್ಯಾಯಮೂರ್ತಿ ಪಿ. ಪಿ. ಬೋಪಣ್ಣ ಆಯೋಗ

ದಿನಾಂಕ ೧೦-೭-೧೯೮೫ರ ಆದೇಶ ಸಂಖ್ಯೆ. ಎಚ್‌ಡಿ ೨೧ ಪಿಸಿಇ ೮೫ರಲ್ಲಿ ಶುದ್ಧೀಕರಿಸಿದ ಸ್ಪಿರಿಟನ್ನು ರಾಜ್ಯದ ಹೊರಗಡೆ ರಫ್ತು ಮಾಡುವ ಬಗ್ಗೆ ತನಿಖೆ ನಡೆಸಲು ಆಯೋಗವನ್ನು ರಚಿಸಲಾಯಿತು.

ನ್ಯಾಯಮೂರ್ತಿ ಪಿ ಪಿ. ಬೋಪಣ್ಣ ತನಿಖಾ ಆಯೋಗವು ದಿನಾಂಕ ೧೮-೨-೧೯೮೭ರಂದು ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ ತನಿಖಾ ಆಯೋಗವು ಸಲ್ಲಿಸಿದ ವರದಿಯನ್ನು ಸರ್ಕಾರವು ಅಂಗೀಕರಿಸಿದೆ. ಆಯೋಗದ ವರದಿಯ ಮುದ್ರಿತ ಪ್ರತಿ ಹಾಗೂ ಕ್ರಮ ಕೈಗೊಂಡ ಮೆಮೊರಾಂಡಂ (ಸರ್ಕಾರಿ ಆದೇಶ) ಪ್ರತಿಯನ್ನು ವಿಧಾನ ಸಭೆಯ ಮುಂದೆ ಮಂಡಿಸಲು ಕ್ರಮ ಕೈಗೊಳ್ಳಲಾಗಿದೆ.

೯ ಜೆ. ಚೆನ್ನವೀರಪ್ಪ ಆಯೋಗ.

ದಿನಾಂಕ ೪-೯-೧೯೮೬ರ ಆದೇಶ ಸಂಖ್ಯೆ. ಎಚ್‌ಡಿ ೬೪ ಪಿಸಿಇ ೮೬ (೧೧)ರಲ್ಲಿ ಚಂದ್ರಗುತ್ತಿಯಲ್ಲಿ ನಡೆದ ಘಟನೆಗಳ ಬಗ್ಗೆ ತನಿಖೆ ನಡೆಸಲು ಆಯೋಗವನ್ನು ರಚಿಸಲಾಯಿತು.

ಜೆ. ಚೆನ್ನವೀರಪ್ಪ ತನಿಖಾ ಆಯೋಗವು ದಿನಾಂಕ. ೧೮-೨-೧೯೮೭ ರಂದು ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು. ಸದರಿ ವರದಿಯನ್ನು ಸರ್ಕಾರವು ಅಂಗೀಕರಿಸಿದೆ. ಆಯೋಗದ ವರದಿಯ ಮುದ್ರಿತ ಪ್ರತಿ ಹಾಗೂ ಕ್ರಮ ಕೈಗೊಂಡ ಮೆಮೊರಾಂಡದ ಪ್ರತಿಯೊಡನೆ ವಿಧಾನ ಸಭೆಯ ಮುಂದೆ ಮಂಡಿಸಲು ಕ್ರಮ ಕೈಗೊಳ್ಳಲಾಗಿದೆ.

೧೦ ಆರ್. ಬಿ. ವೈದ್ಯನಾಥ್ ಆಯೋಗ.

ದಿನಾಂಕ ೪-೬-೧೯೮೪ರಂದು ಹುಬ್ಬಳ್ಳಿಯಲ್ಲಿ ನಡೆದ ಗೋಳಿಬಾರಿನ ಬಗ್ಗೆ ವಿಚಾರಣೆ ನಡೆಸಲು ದಿನಾಂಕ ೧೬-೬-೧೯೮೪ರ ಆದೇಶ ಸಂಖ್ಯೆ. ಎಚ್‌ಡಿ ೩೨ ಪಿಸಿಇ ೮೪ರಲ್ಲಿ ಈ ಆಯೋಗವನ್ನು ನೇಮಿಸಲಾಯಿತು. ಪೊಲೀಸ್ ಅಧಿಕಾರಿಗಳು ತೆಗೆದುಕೊಂಡ ನಿರ್ಣಯದಲ್ಲಿ ಯಾವುದೇ ಅಜಾಗರೂಕತೆ ಇಲ್ಲವೆಂದೂ ಮತ್ತು ಪೊಲೀಸರು ಉಪಯೋಗಿಸಿದ ಬಲವು ಸಮಂಜಸವಾಗಿದೆ ಎಂದು ಆಯೋಗವು ಅಭಿಪ್ರಾಯಪಟ್ಟಿದೆ. ಈ ಸಂದರ್ಭದಲ್ಲಿ ಯಾರ ಮೇಲೂ ಕ್ರಮವು ಅವಶ್ಯವಿಲ್ಲವೆಂದು ನಿರ್ಣಯಿಸಲಾಗಿದೆ.

೧೧ ಶ್ರೀ ಡಿ. ಪಿ. ಹಿರೇಮಂತ ಆಯೋಗ.

ದಿನಾಂಕ ೨೮-೮-೧೯೮೪ರ ಆದೇಶ ಸಂಖ್ಯೆ. ಎಚ್‌ಡಿ ೪೩ ಪಿಸಿಇ ೮೪ರಲ್ಲಿ ದಿನಾಂಕ ೨೬-೭-೧೯೮೪ರಂದು ಬಿಜಾಪುರ ಜಿಲ್ಲೆಯ ಹುನಗುಂದ ಎಂಬಲ್ಲಿ ನಡೆದ ಗೋಳಿಬಾರಿನ ಬಗ್ಗೆ ವಿಚಾರಣೆ ಮಾಡಲು ಈ ಆಯೋಗವನ್ನು ನೇಮಿಸಲಾಯಿತು. ಕೆ.ಎಸ್.ಸಿ (ಡಿ.ಪಿ)ಯ ನಿಯಮಗಳು ೧೯೬೫ರಲ್ಲಿ ಸಂಬಂಧಪಟ್ಟ ವೃತ್ತ ಪೊಲೀಸ್ ಅಧಿಕಾರಿ ಹಾಗೂ ಪೊಲೀಸ್ ಸಬ್ ಇನ್ಸ್‌ಪೆಕ್ಟರನ್ನು ಜಂಟಿ ವಿಚಾರಣೆಗೆ ಒಳಪಡಿಸಿ ಆದೇಶವನ್ನು ಹೊರಡಿಸಲಾಗಿದೆ. ಉಪ ಜಿಲ್ಲಾ ಪೊಲೀಸ್ ಅಧಿಕಾರಿಯ ವಿರುದ್ಧ ವಿಚಾರಣೆಯು ಪ್ರಗತಿ ಪಥದಲ್ಲಿ ಇದೆ. ಕೆ.ಸಿ.ಎಸ್ (ಸಿ.ಸಿ.ಎ) ನಿಯಮ ೧೨ರಲ್ಲಿ ಬಾಗಲಕೋಟೆ ಉಪ ವಿಭಾಗ ಮ್ಯಾಜಿಸ್ಟ್ರೇಟರಿಗೆ ನೋಟಿಸನ್ನು ಕೊಡಲಾಗಿದೆ ಅವರು ನೀಡಿರುವ ಉತ್ತರವನ್ನು ಪರಿಶೀಲಿಸಲಾಗುತ್ತಿದೆ. ಕಾನೂನು ಇಲಾಖೆಗೆ ಬೇಕಾಗಿರುವ ಕೆಲವು ದಾಖಲೆಗಳನ್ನು ಗೃಹ ಇಲಾಖೆಯಿಂದ ತರಿಸಲು ಕ್ರಮತೆಗೆದುಕೊಳ್ಳಲಾಗಿದೆ. ತಾಲ್ಲೂಕು ಕಾರ್ಯಕಾರಿ ಮ್ಯಾಜಿಸ್ಟ್ರೇಟ್ ಬಗ್ಗೆ ಕ್ರಮ ತೆಗೆದುಕೊಳ್ಳುವ ಬಗ್ಗೆ ಕಂದಾಯ ಇಲಾಖೆಯು ಪರಿಶೀಲಿಸುತ್ತಿದೆ.

ಅಧ್ಯಯನ ಸಮಿತಿಗಳು.—

೧ ಡಾ. ಸರೋಜಿನಿ ಮಹಿಷಿ ಅಧ್ಯಯನ ಸಮಿತಿ.

ಕೇಂದ್ರ ಸರ್ಕಾರಿ ವಲಯದ ಉದ್ಯಮಗಳಲ್ಲಿ ಹಾಗೂ ವಾಣಿಜ್ಯ ಬ್ಯಾಂಕುಗಳಲ್ಲಿ ಮತ್ತು ಖಾಸಗಿ ಉದ್ಯಮಗಳಲ್ಲಿ ಕನ್ನಡಿಗರಿಗೆ ಇರುವ ಉದ್ಯೋಗಾವಕಾಶದ ವಾಸ್ತವಿಕ ಪರಿಸ್ಥಿತಿಯನ್ನು ಅಧ್ಯಯನ ಮಾಡಿ ಈ ಸಂಸ್ಥೆಗಳಲ್ಲಿರುವ ಕರ್ನಾಟಕದ ನೌಕರರ ಸಮಸ್ಯೆ ಹಾಗೂ ಕೊರತೆಗಳನ್ನು ವಿಚಾರಿಸಿ ತಿಳಿದು ಅವುಗಳಿಗೆ ಪರಿಹಾರ ಒದಗಿಸುವ ಸೂಕ್ತ ಶಿಫಾರಸ್ಸುಗಳನ್ನು ಮಾಡಲು ಸರ್ಕಾರವು ದಿನಾಂಕ ೪-೮-೧೯೩

ರಂದು ಡಾ: ಸರೋಜಿನಿ ಮಹಿಷಿ ಸಮಿತಿಯನ್ನು ರಚಿಸಿತು. ಈ ಸಮಿತಿಯು ದಿನಾಂಕ ೨೫-೧೨-೧೯೮೪ ರಂದು ಅಸ್ತಿತ್ವಕ್ಕೆ ಬಂದು ಅಂತಿಮ ವರದಿಯಲ್ಲಿ ೫೮ ಶಿಫಾರಸ್ಸುಗಳಿವೆ. ಇವುಗಳಲ್ಲಿ ಕೆಲವು ಶಿಫಾರಸುಗಳನ್ನು ಕೇಂದ್ರ ಸರ್ಕಾರದೊಡನೆ ಸಮಾಲೋಚಿಸಿ ಅನುಷ್ಠಾನಕ್ಕೆ ತರಬೇಕಾಗುತ್ತದೆ. ಕೆಲವು ಶಿಫಾರಸ್ಸುಗಳು ಗಹನ ಮತ್ತು ಕ್ಲಿಷ್ಟಕರವಾಗಿರುವುದರಿಂದ ಅವುಗಳ ಬಗ್ಗೆ ನಿರ್ಣಯ ತೆಗೆದುಕೊಳ್ಳಲು ಇನ್ನೂ ಕಾಲಾವಕಾಶ ಬೇಕು. ಸಮಿತಿಯು ಮಾಡಿರುವ ಶಿಫಾರಸುಗಳನ್ನು ಅನುಷ್ಠಾನಕ್ಕೆ ತರಲು ಇರುವ ಸಾಧಕ ಭಾದಕಗಳನ್ನು ಪರೀಕ್ಷಿಸಲು ಸಂಬಂಧಪಟ್ಟ ಇಲಾಖೆಗಳೊಡನೆ ಸಮಾಲೋಚಿಸಲಾಗುತ್ತಿದೆ. ಈ ಇಲಾಖೆಗಳು ಸಲ್ಲಿಸುವ ವರದಿಯನ್ನು ಆಧರಿಸಿ ಸರ್ಕಾರವು ಅಂತಿಮ ನಿರ್ಣಯವನ್ನು ಆದಷ್ಟು ತೀವ್ರವಾಗಿ ತೆಗೆದುಕೊಳ್ಳಲಾಗುವುದು.

೨ ನ್ಯಾಯಾಧೀಶ ವೆಂಕಟಸ್ವಾಮಿ ವೇತನ ಪರಿಷ್ಕರಣ ಆಯೋಗ.

ರಾಜ್ಯ ಸರ್ಕಾರಿ ನೌಕರರ ವೇತನ ಪ್ರಮಾಣಗಳನ್ನು ಪರಿಷ್ಕರಿಸುವ ಅಗತ್ಯತೆಯನ್ನು ಪರಿಶೀಲಿಸುವ ಸಲುವಾಗಿ ಒಂದು ವೇತನ ಆಯೋಗವನ್ನು ನ್ಯಾಯಾಮೂರ್ತಿ ಶ್ರೀ ಬಿ. ವೆಂಕಟಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ಆಯೋಗವನ್ನು ದಿನಾಂಕ ೨೩-೧೨-೧೯೮೬ರಂದು ರಚಿಸಲಾಯಿತು.

ಆಯೋಗವು ಶಿಫಾರಸು ಮಾಡಿದ ೨೧ ಪರಿಷ್ಕೃತ ವೇತನ ಶ್ರೇಣಿಗಳನ್ನು ಸರ್ಕಾರವು ಈಗಾಗಲೇ ಅಂಗೀಕರಿಸಿದೆ. ಈ ಹೊಸ ವೇತನ ಶ್ರೇಣಿಗಳು ದಿನಾಂಕ ೧-೭-೧೯೮೬ರಂದು ಜಾರಿಗೆ ಬರುವುವು ಮತ್ತು ಪರಿಷ್ಕರಣ ಆರ್ಥಿಕ ಲಾಭವನ್ನು ನೌಕರರಿಗೆ ದಿನಾಂಕ ೧-೧-೧೯೮೭ ರಿಂದ ಕೊಡಲಾಗುವುದು. ಈ ಬಗ್ಗೆ ಅವಶ್ಯಕ ಆದೇಶಗಳನ್ನು ದಿನಾಂಕ ೩೧-೧೨-೧೯೮೬ರಂದು ಹೊರಡಿಸಲಾಗಿದೆ.

ಕೆಲವೊಂದು ವರ್ಗಗಳ ನೌಕರರಿಗೆ ಹೆಚ್ಚಿನ ವೇತನ ಶ್ರೇಣಿಯನ್ನು ಕೊಡಲು ವೇತನ ಆಯೋಗವು ಮಾಡಿದ ಶಿಫಾರಸನ್ನು ಪರಿಶೀಲಿಸಲು ವೇತನ ಸಮಿತಿಯನ್ನು ರಚಿಸಲು ಪ್ರಸ್ತಾಪಿಸಿದೆ. ಪರಿಷ್ಕೃತ ವೇತನ ಶ್ರೇಣಿಗಳಲ್ಲಿನ ಆರೋಪಿತ ನ್ಯೂನತೆಗಳ ಬಗ್ಗೆ ನೌಕರರಿಂದ ಬಂದಿರುವ ಮನವಿಗಳನ್ನೂ ಸಹ ಈ ಸಮಿತಿಯಂ ಪರಿಶೀಲಿಸುವುದು.

೩ ಸ್ಥಳೀಯ ಆರ್ಥಿಕ ಆಯೋಗ.

ರಾಜ್ಯ ಸರ್ಕಾರವು ಸರ್ಕಾರದ ಆದೇಶ ಸಂಖ್ಯೆ. ಎಫ್‌ಡಿಳಿ೦ ಎಫ್‌ಸಿಸಿ ೮೫, ದಿನಾಂಕ ೨೨-೭ ೮೫ರಲ್ಲಿ ಸ್ಥಳೀಯ ಸಂಸ್ಥೆಗಳ ಆರ್ಥಿಕ ಸಮಸ್ಯೆಗಳನ್ನು ಪರಿಶೀಲಿಸಿ ಅವುಗಳಿಗೆ ನೀಡಬಹುದಾದ ಅನುದಾನಗಳ ಬಗ್ಗೆ ಸೂಕ್ತ ಶಿಫಾರಸು ಮಾಡಲು ಶ್ರೀಯುತ ಫಾದರ್ ಜೇಕಬ್‌ರವರ ಅಧ್ಯಕ್ಷತೆಯಲ್ಲಿ ಸ್ಥಳೀಯ ಆರ್ಥಿಕ ಆಯೋಗವನ್ನು ರಚಿಸಿತು,

ಆದೇಶ ಸಂಖ್ಯೆ. ಎಫ್ ಡಿ ೧೧ ಎಫ್‌ಸಿಸಿ ೮೫ ದಿನಾಂಕ ೪-೫-೧೯೮೫ ರಲ್ಲಿ ಶ್ರೀಯುತ ಫಾದರ್ ಜೇಕಬ್‌ರವರು ರಾಜೀನಾಮೆ ನೀಡಿದ ಪ್ರಯುಕ್ತ ಅವರ ಜಾಗದಲ್ಲಿ ಶ್ರೀಯುತ ಎನ್, ಲಕ್ಷ್ಮಣರಾವ್ ಅವರನ್ನು ಸ್ಥಳೀಯ ಆರ್ಥಿಕ ಆಯೋಗದ ಅಧ್ಯಕ್ಷರನ್ನಾಗಿ ನೇಮಿಸಲಾಯಿತು.

ಈ ಆಯೋಗವು ತನ್ನ ವರದಿಯನ್ನು ೨೨-೭-೧೯೮೫ರಂದು ಸರ್ಕಾರಕ್ಕೆ ಸಲ್ಲಿಸಿರುತ್ತೆ ಮತ್ತು ಈಗ ವರದಿಯಂ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

೪ ಶ್ರೀಮತಿ ನಂದನಾ ರೆಡ್ಡಿಯವರ ವಿಚಾರಣಾ ಸಮಿತಿ.

ಶ್ರೀ ಬಿ. ಶಿವಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ೬-೮-೧೯೮೪ರ ಆದೇಶದಲ್ಲಿ ರಚಿತವಾದ ಬಾಲ ಕಾರ್ಮಿಕ ವಿಚಾರಣಾ ಸಮಿತಿಯು ವರದಿ ಸಲ್ಲಿಸುವ ಮೊದಲನೇ ಶ್ರೀಮತಿ ನಂದನಾರೆಡ್ಡಿಯವರ ಅಧ್ಯಕ್ಷತೆಯಲ್ಲಿ ವಿಚಾರಣಾ ಸಮಿತಿಯನ್ನು ಪುನರ್ ರಚಿಸಲಾಯಿತು. ಪುನರ್ ರಚಿತ ಸಮಿತಿಯು ತನಗೆ ವಹಿಸಿದ ಅಂಶಗಳ ಬಗ್ಗೆ ವಿಚಾರಣೆ ನಡೆಸಿ, ವರದಿಯಂನ್ನು ತಯಾರಿಸಿ ಸರ್ಕಾರಕ್ಕೆ ಸಲ್ಲಿಸಿದೆ. ಸಮಿತಿಯು ವರದಿಯನ್ನು ಸರ್ಕಾರವು ಒಪ್ಪಿದೆ ಸಮಿತಿಯ ಶಿಫಾರಸ್ಸುಗಳನ್ನು ಅನುಷ್ಠಾನಕ್ಕೆ ತರಲು ಇರುವ

ಮಾರ್ಗಗಳನ್ನು ಸೂಚಿಸಲು ಉನ್ನತ ಅಧಿಕಾರಿಗಳ ಸಮಿತಿಯೊಂದನ್ನು ಯೋಜನಾ ಇಲಾಖೆಯ ಆಯುಕ್ತರು ಮತ್ತು ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ೨೦–೧೧–೧೯೬೬ರ ಆದೇಶದ ಮೂಲಕ ರಚಿಸಲಾಗಿದೆ ಉನ್ನತಾಧಿಕಾರಿಗಳ ಸಮಿತಿಯು ವರದಿ ಸಲ್ಲಿಸಿದ ನಂತರ ವಿಚಾರಣಾ ಸಮಿತಿಯ ಶಿಫಾರಸ್ಸುಗಳನ್ನು ಅನುಷ್ಠಾನಕ್ಕೆ ತರುವ ಬಗ್ಗೆ ಸರ್ಕಾರವು ಸೂಕ್ತ ಕ್ರಮ ಕೈಗೊಳ್ಳುವುದು.

ಅಧ್ಯಕ್ಷರೇ. — ಈಗ ಕೊಟ್ಟಿರುವ ಉತ್ತರದಲ್ಲಿ ಒಂದು ಸಣ್ಣ ತಿದ್ದುಪಡಿಯನ್ನು ಮಾಡಲಿಕ್ಕೆ ಬಯಸುತ್ತೇನೆ. ಯಾವ ಯಾವ ಕಮಿಷನ್‌ಗಳ ರಿಪೋರ್ಟ್ ಬಂದಿಲ್ಲ ಎಂದು ಹೇಳಿ ನಾವು ಮಾಹಿತಿ ಕೊಟ್ಟಿದ್ದೇವೆ. ಅದರಲ್ಲಿ ಜಸ್ಟೀಸ್ ಬೋಪಣ್ಣ ಕಮಿಷನ್ ವರದಿ ಬಂದಿದೆ. ಶ್ರೀ ಚನ್ನವೀರಪ್ಪ ಕಮಿಷನ್ ವರದಿ ಬಂದಿದೆ. ಉತ್ತರ ತಯಾರು ಮಾಡುವಾಗ ಬಂದಿರಲಿಲ್ಲ. ಈಗ ಬಂದಿದೆ.

ಶ್ರೀ ಎನ್. ಎಂ. ಅಡ್ಯಂತಾಯ.— ಮಾನ್ಯ ಅಧ್ಯಕ್ಷರೇ ಸರ್ಕಸ್ಸ್ ದುರಂತದ ಬಗ್ಗೆ ಆಂದಿನ ಪೋಲೀಸ್ ಕಮಿಷನರ್ ಶ್ರೀ ಬಿ. ಎನ್. ಗರುಡಾಚಾರ್‌ರವರು ತಪ್ಪಿತಸ್ಥರೆಂದೂ ಹೇಳಿದ್ದರೂ ಸಹ ತಾವು ಅವರನ್ನು ಡಿ. ಜಿ. ಪಿ. ಮಾಡಿದಿರಿ. ತದನಂತರ ಅವರನ್ನು ಅಡ್ಮಿನಿಸ್ಟ್ರೇಟಿವ್ ಟ್ರಿಬ್ಯುನಲ್ ಮೆಂಬರ್ ಆಗಿ ಏತಕ್ಕೆ ಮಾಡಿದಿರಿ ? ಎರಡನೆಯದಾಗಿ ಜಸ್ಟೀಸ್ ವೆಂಕಟಸ್ವಾಮಿ ಆಯೋಗದ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು ದಿನಾಂಕ ೩೦–೮–೮೪ರಲ್ಲಿ ಅಕ್ಕಿಯನ್ನು ಹೊರರಾಜ್ಯಗಳಿಗೆ ಕಳುಹಿಸಿ ಕೊಡುವ ವಿಚಾರದಲ್ಲಿ ಆಂದಿನ ಆಹಾರ ಮಂತ್ರಿಗಳು ಅಧಿಕಾರ ದುರುಪಯೋಗ ಮಾಡಿದ್ದಾರೆಂದು ವರದಿಯಲ್ಲಿ ಹೇಳಿದ್ದಾರೆ. ಆದರೂ ಸಹ ತಾವೇತಕ್ಕೆ ಅವರ ಮೇಲೆ ಮೊಕದ್ದಮೆ ಹಾಕಲಿಲ್ಲ? ಅದೇ ರೀತಿಯಲ್ಲಿ ಸ್ಥಳೀಯ ಆರ್ಥಿಕ ಆಯೋಗದ ಅಧ್ಯಕ್ಷರಾಗಿದ್ದ ಶ್ರೀ ಫಾದರ್ ಜೇಕಬ್‌ರವರು ಒಂದು ವರದಿಯನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಅವರ ವರದಿಯನ್ನು ಏತಕ್ಕೆ ಜಾರಿಗೆ ಕೊಡಲಿಲ್ಲ. ಅವರಿಗೆ ಒಂದು ಕಾರು ಬಂಗಲೆ ಕೊಟ್ಟು ಲಕ್ಷಾಂತರ ರೂಪಾಯಿಗಳನ್ನು ಸರ್ಕಾರ ಖರ್ಚು ಮಾಡಿದ್ದು ಅದರ ಪ್ರತಿಫಲವೇನು ?

ಶ್ರೀ ರಾಮಕೃಷ್ಣ ಹೆಗಡೆ — ಮಾನ್ಯ ಅಧ್ಯಕ್ಷರೇ. ಸರ್ಕಸ್ ದುರಂತದ ವಿಚಾರದಲ್ಲಿ ಆಯೋಗ ಮಾಡಿದ್ದ ಶಿಫಾರಸ್ಸುಗಳನ್ನು, ಹಾಗೂ ಬೇರೆ ಬೇರೆ ವಿಚಾರಗಳ ಬಗ್ಗೆ ಕಾರ್ಯಕ್ರಮಗಳನ್ನು ಈಗಾಗಲೇ ಅನುಷ್ಠಾನಕ್ಕೆ ತಂದಿದ್ದೇವೆ. ಮಾನ್ಯ ಸದಸ್ಯರು ಒಬ್ಬ ಹಿರಿಯ ಪೋಲೀಸ್ ಅಧಿಕಾರಿಯ ಹೆಸರನ್ನು ಹೇಳಿದರು. ಆ ವಿಚಾರದಲ್ಲಿ ಮುಂದಿನ ತನಿಖೆ ಆಯಿತು. ಆದರೆ ಆಯೋಗದ ವರದಿಯಲ್ಲಿ ಅವರ ವಿರುದ್ಧವಾಗಿ ಯಾವುದೇ ಪ್ರತ್ಯೇಕವಾದ ನೇರವಾದ ಜವಾಬ್ದಾರಿ ಇದೆ ಎನ್ನುವ ವಿಚಾರ ಇಲ್ಲದೆ ಇದ್ದುದರಿಂದ ಯಾವುದೇ ರೀತಿಯಾದ ಕಾರ್ಯಕ್ರಮವನ್ನು ತೆಗೆದುಕೊಳ್ಳುತಕ್ಕಂಥ ಅಗತ್ಯವಿಲ್ಲವೆಂದು ನಾನು ಭಾವಿಸುತ್ತೇನೆ. ಅದಾದ ಮೇಲೆ ಸ್ಥಾನೀಕ ಸಂಸ್ಥೆಗಳ ಹಣಕಾಸಿನ ವಿಚಾರದಲ್ಲಿ ನೇಮಿಸಿದ್ದ ಆಯೋಗದ ವರದಿ ಸರ್ಕಾರಕ್ಕೆ ಸಲ್ಲಿಸಿದ್ದು ಆ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ. ಇದಕ್ಕಾಗಿ ನಾವು ಸಂಬಂಧಪಟ್ಟ ಬೇರೆ ಬೇರೆ ಇಲಾಖೆಗಳ ಅಭಿಪ್ರಾಯಗಳನ್ನು ಕೇಳುತ್ತಿದ್ದೇವೆ. ಈ ಬಗ್ಗೆ ವಿಚಾರಗಳನ್ನು ಕ್ರೋಢೀಕರಿಸಿ ಮಂತ್ರಿಮಂಡಲ ಒಂದು ತೀರ್ಮಾನ ತೆಗೆದುಕೊಳ್ಳುತ್ತದೆ. ಅದಾದ ಮೇಲೆ ಜಸ್ಟೀಸ್ ವೆಂಕಟಸ್ವಾಮಿ ಆಯೋಗದ ವರದಿ ವಿಚಾರದಲ್ಲಿ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಸಿವೆಂಟ್ ಸಾಗಾಣಿಕೆ ವಿಚಾರದಲ್ಲಿ ಏನೊಂದು ಅಭಿಪ್ರಾಯವನ್ನು ಕೊಟ್ಟಿದ್ದಾರೋ ಆ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎನ್. ಎಂ. ಅಡ್ಯಂತಾಯ.— ಮಾನ್ಯ ಅಧ್ಯಕ್ಷರೇ, ನಾನು ಸಿಮೆಂಟ್ ವಿಚಾರದಲ್ಲಿ ಪ್ರಸ್ತಾಪ ಮಾಡಲಿಲ್ಲ. ವೆಂಕಟಸ್ವಾಮಿ ಆಯೋಗದ ವರದಿ ಪುಟ ೭ ರಲ್ಲಿ ಏನು ಹೇಳಿದ್ದಾರೆ ಎಂದರೆ ಸರ್ಕಾರಿ ಆದೇಶ ಸಂಖ್ಯೆ ಎಫ್. ಎಫ್ ಡಿ. ೪೧೭ ಎಫ್, ಇ. ಟಿ. ೮೨ ದಿನಾಂಕ ೨೪–೬–೮೪ ರಲ್ಲಿ ನ್ಯಾಯಮೂರ್ತಿ ವೆಂಕಟಸ್ವಾಮಿ ಆಯೋಗವನ್ನು ಹೊರ ರಾಜ್ಯಗಳಿಗೆ ಅಕ್ಕಿ, ಭತ್ತವನ್ನು ಮಂತ್ರಿ ನಾಚಪ್ಪ ಅಕ್ಕಿಯನ್ನು ಸಾಗಿಸಲು...

ಅಧ್ಯಕ್ಷರು.— ತಾವು ನೇರವಾಗಿ ಪ್ರಶ್ನೆ ಕೇಳಿ. ಓದುವುದು ಬೇಡ.

ಶ್ರೀ ಎನ್. ಎಂ. ಅಡ್ಯಂತಾಯ.— ನೀರಾಕ್ಷೇಪಣಾ ಪತ್ರಗಳನ್ನು ಕೊಟ್ಟ ಬಗ್ಗೆ ವಿಚಾರಣೆ ನಡೆಯಿಸಲು...

ಅಧ್ಯಕ್ಷರು.— ನೇರವಾಗಿ ಪ್ರಶ್ನೆ ಕೇಳಿ. ಆಗಲೇ ಕೇಳಿದ ರೀತಿ.

ಶ್ರೀ ಎನ್. ಎಂ. ಅಡ್ಯಂತಾಯ — ಮಾನ್ಯ ಅಧ್ಯಕ್ಷರೇ ಆಯೋಗದ ವರದಿಯ ಪ್ರಕಾರ ಮಂತ್ರಿಗಳು ತಪ್ಪಿತಸ್ಥರಾಗುತ್ತಾರೆ. ವರದಿಯಲ್ಲಿ ಡೈರೆಕ್ಟ್ ಆಗಿ ಹೇಳಿದ್ದಾರೆ. ಅಂತಹ ಮಂತ್ರಿಗಳನ್ನೇ ತಾವು ಇನ್ನೂ ಮಂತ್ರಿಗಳನ್ನಾಗಿ ಇಟ್ಟುಕೊಂಡಿದ್ದೀರಿ.

ಶ್ರೀ ರಾಮಕೃಷ್ಣ ಹೆಗಡೆ. — ಮಾನ್ಯ ಅಧ್ಯಕ್ಷರೇ, ಅಂತಹ ಯಾವುದೇ ಒಬ್ಬ ಮಂತ್ರಿಯನ್ನು ನನ್ನ ಮಂತ್ರಿ ಮಂಡಲದಲ್ಲಿ ಇಟ್ಟುಕೊಂಡಿಲ್ಲ. ಅಂದರೆ ಆಯೋಗದ ವರದಿಯಲ್ಲಿ ಆರೋಪವಿರುವಂತಹವರು ಯಾರೂ ಇಲ್ಲ.

ಶ್ರೀ ಎನ್. ಎಂ. ಅಡ್ಯಂತಾಯ. — ನ್ಯಾಯಮೂರ್ತಿ ವೆಂಕಟಸ್ವಾಮಿ ಆಯೋಗವನ್ನು ನೀವೇ ನೇಮಕ ಮಾಡಿದವರು. ಅವರು ಕೊಟ್ಟ ರಿಪೋರ್ಟ್ ಪ್ರಕಾರ ಹೊರ ರಾಜ್ಯಗಳಿಗೆ ಅಕ್ಕಿಯನ್ನು, ಭತ್ತ ಮಂತ್ತು ನುಚ್ಚನ್ನು ಸಾಗಿಸುವ ವಿಷಯದಲ್ಲಿ ಅಕ್ರಮವಾಗಿರುವುದಕ್ಕೆ, ಸಂಬಂಧಪಟ್ಟ ಮಂತ್ರಿಯವರೇ ಜವಾಬ್ದಾರರು ಎಂದು ಹೇಳಿದ್ದಾರೆ. ಅವರ ಮೇಲೆ ಇನ್ನೂ ಆಕ್ಷನ್ ಏಕೆ ತೆಗೆದುಕೊಂಡಿಲ್ಲ? ಬ್ಯಾಡಗಿ ಕಮಿಷನಲ್ಲಿ ತಪ್ಪಿತಸ್ಥರೆಂದು ಹೇಳಲಾದ ಕಾನ್ಸ್‌ಟೇಬಲ್‌ಗಳ ಮೇಲೆ ಕ್ರಮ ತೆಗೆದುಕೊಂಡು ಅವರನ್ನು ಡಿಸ್‌ಮಿಸ್ ಮಾಡಿದ್ದೀರಿ. ಆದರೆ, ಸಚಿವರ ಮೇಲೆ ಯಾವ ಕ್ರಮವನ್ನೂ ತೆಗೆದು ಕೊಳ್ಳಲಿಲ್ಲ.

ಅಧ್ಯಕ್ಷರು. — ನೀವು ಆಗಲೇ ಪ್ರಶ್ನೆ ಕೇಳಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ತಾವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎನ್. ಎಂ. ಅಡ್ಯಂತಾಯ. — ಒಟ್ಟು ೧೧ ಕಮಿಷನ್‌ಗಳ ರಿಪೋರ್ಟ್ ಬಂದಿವೆ.

ಅಧ್ಯಕ್ಷರು. — ಇದರ ಬಗ್ಗೆ ಡಿಸ್ಕಷನ್ ಮಾಡಬೇಕಾದರೆ, ನೋಟೀಸ್ ಕೊಡಿ. ಈಗ ಮಾನ್ಯ ಜಮಖಂಡಿಯವರು ತಮ್ಮ ಪ್ರಶ್ನೆ ಕೇಳಿ.

ಮುಧೋಳದಲ್ಲಿ ಸ್ಮಾರಕ ಭವನದ ನಿರ್ಮಾಣ

೫೩೭. **ಶ್ರೀ ಬಿ.ಜಿ. ಜಮಖಂಡಿ** (ಮುಧೋಳ). — ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮುಧೋಳದಲ್ಲಿ ಕವಿ ಚಕ್ರವರ್ತಿ ರನ್ನನ ಸ್ಮಾರಕ ಭವನ ನಿರ್ಮಿಸುವ ಬಗ್ಗೆ ಸರ್ಕಾರದವರು ಯೋಚಿಸಿದ್ದಾರೆಯೇ ?

ಆ) ಹಾಗಿದ್ದಲ್ಲಿ, ಸ್ಮಾರಕ ಭವನವನ್ನು ಯಾವಾಗ ನಿರ್ಮಿಸಲಾಗುವುದು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು). —

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಬಿ ಜಿ. ಜಮಖಂಡಿ. — ಮಾನ್ಯ ಅಧ್ಯಕ್ಷರೇ, ಮುಧೋಳ ತಾಲ್ಲೂಕಿನಲ್ಲಿ ಹುಟ್ಟಿದ ಕವಿ ರನ್ನನು ಗದಾಯುದ್ಧ ಎಂಬ ಮಹಾ ಕಾವ್ಯವನ್ನು ರಚಿಸಿದವನು. ಇಂಥ ದೊಡ್ಡ ಕವಿ ರನ್ನನ ಸ್ಮಾರಕವನ್ನು ನಿರ್ಮಿಸುವ ಬಗ್ಗೆ ಸರ್ಕಾರ ಯೋಚನೆ ಮಾಡುತ್ತಿಲ್ಲವೆಂದರೆ ಬಹಳ ಖೇದ ಎನಿಸುತ್ತದೆ. ಕವಿ ರನ್ನನ ಸ್ಮಾರಕವನ್ನು ನಿರ್ಮಾಣ ಮಾಡುವ ಬಗ್ಗೆ ನಮ್ಮ ತಾಲ್ಲೂಕಿನಲ್ಲಿರುವ ಹಲವಾರು ಸಂಘ ಸಂಸ್ಥೆಗಳಲ್ಲಿ ನಾನು ಮಾತನಾಡಿದ್ದೇನೆ ಈ ಸ್ಮಾರಕವನ್ನು ನಿರ್ಮಾಣ ಮಾಡುವುದಕ್ಕೆ ಪಬ್ಲಿಕ್ಸ್ ಹಣವನ್ನು ಕಾಂಟ್ರಿಬ್ಯೂಟ್ ಮಾಡಲಿಕ್ಕೆ ತಯಾರಿದ್ದಾರೆ. ಚನ್ನಗಿರಿ ತಾಲ್ಲೂಕಿನಲ್ಲಿ ಶಿವಾಜಿ ಮಹಾರಾಜನ ತಂದೆ ಷಹಾಜಿಯ ಸ್ಮಾರಕವನ್ನು ಕಟ್ಟುತ್ತಿರುವುದು ಎಲ್ಲರಿಗೂ ಗೊತ್ತಿದೆ. ಕರ್ನಾಟಕದಲ್ಲೇ ಹುಟ್ಟಿ ಬೆಳೆದು ಕನ್ನಡ ನಾಡಿಗೆ ಸೇವೆ ಸಲ್ಲಿಸಿರುವ ಮಹಾ ಕವಿ ರನ್ನನ ಸ್ಮಾರಕವನ್ನು ಕಟ್ಟಲಿಕ್ಕೆ ಸರ್ಕಾರ ಸಹಾಯ ಮಾಡಬೇಕೆಂದು ಸನ್ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.